APRIL 29, 2026

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಭಾರತದ ನವೋದ್ಯಮ ಕ್ಷೇತ್ರದಲ್ಲಿ, ಪ್ರಸಕ್ತ ವರ್ಷದ, ಮೊದಲ ಮೂರು ತಿಂಗಳ ಅವಧಿಯಲ್ಲಿ, ಬೆಂಗಳೂರು, ಅಗ್ರಸ್ಥಾನದಲ್ಲಿ ಮುಂದುವರೆದಿದೆ ಎಂದು, ಮಾಹಿತಿ ತಂತ್ರಜ್ಞಾನ ಖಾತೆ ಸಚಿವ, ಪ್ರಿಯಾಂಕ ಖರ್ಗೆ, ಸಂತಸ ವ್ಯಕ್ತ ಪಡಿಸಿದ್ದಾರೆ. 2026ರ ಜನವರಿಯಿಂದ, ಮಾರ್ಚ್ ಅಂತ್ಯದ ವರೆಗೆ, 89 ಒಪ್ಪಂದಗಳ ಮೂಲಕ, 7 ಸಾವಿರದ 7 ನೂರಾ 47 ಕೋಟಿ ರೂಪಾಯಿ, ರಾಜ್ಯದಲ್ಲಿ ಹೂಡಿಕೆಯಾಗಿದೆ ಎಂದು, ತಿಳಿಸಿದ್ದಾರೆ. ಬೆಂಗಳೂರು ನಗರ, ಜಾಗತಿಕ ಮಟ್ಟದಲ್ಲಿ, 5ನೇ ಅತಿ ದೊಡ್ಡ ಯೂನಿಕಾರ್ನ್ ನವೋದ್ಯಮಗಳ ಕೇಂದ್ರವಾಗಿ, ರೂಪುಗೊಂಡಿದೆ. ಡೀಪ್‌ಟೆಕ್ ನಿಂದ ದೈನಂದಿನ ತಂತ್ರಜ್ಞಾನದ ವರೆಗೆ, ಬೆಂಗಳೂರಿನ ನವೋದ್ಯಮಗಳು, ಪ್ರಮುಖ ವಲಯದಲ್ಲಿ, ಪ್ರಾಬಲ್ಯ ಸಾಧಿಸಿವೆ ಎಂದು, ಮಾಹಿತಿ ನೀಡಿದ್ದಾರೆ.

<><><>

ಕರ್ನಾಟಕ ಸಾಬೂನು ಮತ್ತು ಮಾರ್ಜಕಗಳ ನಿಗಮ – ಕೆ.ಎಸ್.ಡಿ.ಎಲ್. 2025–26ನೇ ಆರ್ಥಿಕ ವರ್ಷದಲ್ಲಿ, 2 ಸಾವಿರದ 16 ಕೋಟಿ ರೂಪಾಯಿ ವಹಿವಾಟು ದಾಖಲಿಸಿ, 506 ಕೋಟಿ ರೂಪಾಯಿ, ಲಾಭ ಗಳಿಸಿದೆ. ಸಂಸ್ಥೆಯ ವಹಿವಾಟನ್ನು, ಮತ್ತಷ್ಟು ದಾಖಲೆ ಮಟ್ಟಕ್ಕೆ ಕೊಂಡೊಯ್ಯಲು, ವಿಜಯಪುರದಲ್ಲಿ, 50 ಎಕರೆ ನೂತನ ಉತ್ಪಾದನಾ ಘಟಕ ಆರಂಭವಾಗಲಿದ್ದು, 229 ಕೋಟಿ ರೂಪಾಯಿ ಮಂಜೂರು ಮಾಡಲಾಗಿದೆ ಎಂದು, ಬೃಹತ್ ಕೈಗಾರಿಕೆಗಳ ಖಾತೆ ಸಚಿವ, ಎಂ.ಬಿ. ಪಾಟೀಲ, ಬೆಂಗಳೂರಿನಲ್ಲಿ ತಿಳಿಸಿದ್ದಾರೆ.

<><><>

ಮೈಸೂರು ಸ್ಯಾಂಡಲ್ ಸೋಪ್ ತಯಾರಿಕೆಗೆ, ಗಂಧದ ಎಣ್ಣೆಯೇ ಮೂಲವಸ್ತು. ಕೆ.ಎಸ್.ಡಿ.ಎಲ್. ರೈತರೊಂದಿಗೆ, 'ಗ್ರೋ ಮೋರ್ ಸ್ಯಾಂಡಲ್' ಕಾರ್ಯಕ್ರಮ ರೂಪಿಸಿದೆ. 10 ವರ್ಷಗಳಲ್ಲಿ, 10 ಸಾವಿರ ಎಕರೆಯಲ್ಲಿ, ಗಂಧದ ನೆಡುತೋಪು ಬೆಳೆಸಲಾಗುವುದು. ರೈತರಿಗೆ ಪ್ರತಿ ಗಿಡಕ್ಕೆ, 3 ವರ್ಷಗಳಿಗೆ, 500 ರೂಪಾಯಿ ಪ್ರೋತ್ಸಾಹ ಧನ ನೀಡಲಾಗುವುದು ಎಂದು, ಸಚಿವರು ತಿಳಿಸಿದರು.

<><><>

ಹೊಸ ಶೈಕ್ಷಣಿಕ ವರ್ಷ, 2026–27 ರಲ್ಲಿ, ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕಗಳ ಕೊರತೆ ಎದುರಾಗದಂತೆ, ಮುಂಜಾಗ್ರತೆ ವಹಿಸುವಂತೆ, ಕೇಂದ್ರ ಶಿಕ್ಷಣ ಖಾತೆ ಸಚಿವ ಧರ್ಮೇಂದ್ರ ಪ್ರಧಾನ್, ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಪರಿಷತ್, (ಎನ್.ಸಿ.ಇ.ಆರ್.ಟಿ.) ಅಧಿಕಾರಿಗಳಿಗೆ, ಹೊಸ ದಿಲ್ಲಿಯಲ್ಲಿ, ನಿರ್ದೇಶನ ನೀಡಿದ್ದಾರೆ. ಪಠ್ಯ ಪುಸ್ತಕಗಳ ತೀವ್ರ ಕೊರತೆ ಎದುರಾಗಬಹುದು ಎಂಬ, ಸೂಚನೆ ದೊರೆತ ಹಿನ್ನೆಲೆ, ಸಚಿವಾಲಯದ ಹಿರಿಯ ಅಧಿಕಾರಿಗಳೊಂದಿಗೆ, ಸಚಿವರು ಸಭೆ ನಡೆಸಿದರು.

<><><>

ಕರ್ನಾಟಕ ಲಲಿತ ಕಲಾ ಅಕಾದೆಮಿ, 2023–24, 2024–25 ಮತ್ತು 2025–26ನೇ ಸಾಲಿನ, ಗೌರವ ಪ್ರಶಸ್ತಿಗೆ, ನಾಡಿನ ಹಿರಿಯ ಆರು ಕಲಾ ಸಾಧಕರನ್ನು ಆಯ್ಕೆ ಮಾಡಿದೆ. ಅಕಾದೆಮಿ ಅಧ್ಯಕ್ಷ ಪ.ಸ. ಕುಮಾರ, ಬೆಂಗಳೂರಿನಲ್ಲಿ, ಆಯ್ಕೆಯಾದ ಕಲಾವಿದರ ಪಟ್ಟಿ, ಬಿಡುಗಡೆ ಮಾಡಿದರು. ಹೆಸರಾಂತ ಕಲಾವಿದರಾದ, ಶಶಿಕಲಾ ಹೂಗಾರ, ಸಿ. ಚಿಕ್ಕಣ್ಣ, ಬಿ.ಎಸ್. ದೇಸಾಯಿ, ಕೆ.ಸಿ.ಎಸ್. ಪ್ರಸನ್ನ, ಎಂ.ಜಿ. ದೊಡ್ಡಮನಿ ಹಾಗೂ ಬಾಬು ಜತ್ಕರ್, ಗೌರವ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಪ್ರಶಸ್ತಿ 50 ಸಾವಿರ ರೂಪಾಯಿ ನಗದು ಹಾಗೂ ಸ್ಮರಣಿಕೆ, ಒಳಗೊಂಡಿದೆ.

25 ಸಾವಿರ ರೂಪಾಯಿ ನಗದು ಹಾಗೂ ಸ್ಮರಣಿಕೆ ಒಳಗೊಂಡ, ವರ್ಣಶ್ರೀ ಪ್ರಶಸ್ತಿಗೆ ಭಾಜನರಾಗಿರುವ, ಉತ್ತರಕನ್ನಡ ಜಿಲ್ಲೆ, ಅಂಕೋಲಾ ತಾಲೂಕು, ಗೋಕರ್ಣದ, ಹೆಸರಾಂತ ಕಲಾವಿದ ಹಾಗೂ ಕಾವಿ ಕಲೆ ಪರಿಣಿತ, ರವಿ ಗುನಗಾ, ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ಕಾವಿ ಕಲೆ ಪರಿಣಿತ ರವಿ ಗುನಗಾ ಧ್ವನಿ 45 ಸೆಕೆಂದುಗಳು

<><><>

ಕೊಟ್ಪಾ ಕಾಯ್ದೆಯಡಿ, ಕಳೆದ ಒಂದು ವರ್ಷದಲ್ಲಿ, 2 ಲಕ್ಷ 98 ಸಾವಿರದ 400 ರೂಪಾಯಿ ದಂಡ ಆಕರಿಸಲಾಗಿದೆ ಎಂದು, ಮೈಸೂರು ಜಿಲ್ಲಾಧಿಕಾರಿ, ಜಿ. ಲಕ್ಷ್ಮೀಕಾಂತ ರೆಡ್ಡಿ, ತಿಳಿಸಿದ್ದಾರೆ. ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಅವರು, ಆರೋಗ್ಯ ಮಿ ್ನ್ ಯೋಜನೆ ಪ್ರಗತಿ ಪರಿಶೀಲಿಸಿದರು.

<><><>

ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮ, ಯೋಜನೆಯಡಿ, ಮಕ್ಕಳ ಆರೋಗ್ಯ ಪರೀಕ್ಷೆ ಕೈಗೊಂಡು, ಅಪೌಷ್ಟಿಕತೆಯಿಂದ ಬಳಲುತ್ತಿರುವ ಹೆಗ್ಗಡದೇವನಕೋಟೆ ತಾಲೂಕಿನ ಮಕ್ಕಳ ಬಗ್ಗೆ, ತೀವ್ರ ನಿಗಾ ವಹಿಸುವಂತೆ, ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ, ಸೂಚಿಸಿದರು.

<><><>

ರಾಜ್ಯ ಮಾನವ ಹಕ್ಕು ಆಯೋಗದ ಅಧ್ಯಕ್ಷ, ಟಿ. ಶಾಮ ಭಟ್, ಉತ್ತರಕನ್ನಡ ಜಿಲ್ಲೆ, ಕಾರವಾರದ, ಹಿಂದುಳಿದ ವರ್ಗಗಳ ಇಲಾಖೆ ಮತ್ತು ಸಮಾಜ ಕಲ್ಯಾಣ ಇಲಾಖೆ, ವಸತಿ ನಿಲಯಗಳಿಗೆ ಭೇಟಿ ನೀಡಿ, ಪರಿಶೀಲಿಸಿದರು. ವಸತಿ ಗೃಹದ ವಿದ್ಯಾರ್ಥಿಗಳೊಂದಿಗೆ, ಸಂವಾದ ನಡೆಸಿದರು. ಬಳಿಕ, ಕಾರವಾರದ ಕ್ರಿಮ್ಸ್ ಆಸ್ಪತ್ರೆ, ಜಿಲ್ಲಾ ಕಾರಾಗೃಹಕ್ಕೆ ಭೇಟಿ ನೀಡಿ, ಪರಿಶೀಲಿಸಿದ ಅವರು, ಕೈದಿಗಳ ಕುಂದು ಕೊರತೆ ಆಲಿಸಿದರು.

<><><>

ಬೆಂಗಳೂರಿನ, ರಾಜ್ಯ ದೂರ ಸಂವೇದಿಅನ್ವಯಿಕ ಕೇಂದ್ರ, ಇಂದು ಮತ್ತು ನಾಳೆ, ರಾಜ್ಯ ಮಟ್ಟದ, ವಿಶೇ ' ಪ್ರದರ್ಶನ ಹಾಗೂ ವಿದ್ಯಾರ್ಥಿಗಳ ಆವಿಷ್ಕಾರ ಮಾದರಿ ಸ್ಪರ್ಧೆಯನ್ನು, ಬೆಂಗಳೂರಿನ ದೊಡ್ಡ ಬೆಟ್ಟಹಳ್ಳಿಯ, ಮೇಜರ್ ಸಂದೀಪ ಉನ್ನಿಕೃ ್ಣನ್ ಮಾರ್ಗದ, ದೂರ ಸಂವೇದಿ ಭವನದಲ್ಲಿ ಆಯೋಜಿಸಿದೆ.

<><><>

ಕ್ರೀಡಾ ಇಲಾಖೆ, 22 ದಿನಗಳ ಕಾಲ, ಬಳ್ಳಾರಿಯಲ್ಲಿ ಆಯೋಜಿಸಿದ್ದ, ಅಥ್ಲೆಟಿಕ್ಸ್ ಉಚಿತ ತರಬೇತಿ ಶಿಬಿರದಲ್ಲಿ ಪಾಲ್ಗೊಂಡ, 92 ಕ್ರೀಡಾ ಪ್ರತಿಭೆಗಳನ್ನು, ಅಂತಿಮವಾಗಿ, ಆಯ್ಕೆ ಮಾಡಲಾಗಿದೆ.

<><><>

ನಾಳೆ, ಏಪ್ರಿಲ್ 30 ರಿಂದ ಮೇ 13ರ ವರೆಗೆ, ದ್ವಿತೀಯ ಪಿ.ಯು.ಸಿ. 2ನೇ, ವಾರ್ಷಿಕ ಪರೀಕ್ಷೆ ನಡೆಯಲಿದೆ. ಉತ್ತರಕನ್ನಡ ಜಿಲ್ಲೆಯಲ್ಲಿ, ಒಟ್ಟು 2 ಸಾವಿರ 820 ಪರೀಕ್ಷಾರ್ಥಿಗಳು, ಹೆಸರು ನೋಂದಾಯಿಸಿದ್ದಾರೆ ಎಂದು, ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ ತಿಳಿಸಿದ್ದಾರೆ.

<><><>

ಹಾವೇರಿ ಜಿಲ್ಲೆಯಲ್ಲಿ, ದ್ವಿತೀಯ ಪಿ.ಯು.ಸಿ. 2ನೇ ವಾರ್ಷಿಕ ಪರೀಕ್ಷೆಗೆ, 6 ಸಾವಿರದ 230 ವಿದ್ಯಾರ್ಥಿಗಳು, ಹೆಸರು ನೋಂದಾಯಿಸಿದ್ದಾರೆ. ಜಿಲ್ಲೆಯ 7 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ ಎಂದು, ಅಪರ ಜಿಲ್ಲಾಧಿಕಾರಿ, ನಾಗರಾಜ ತಿಳಿಸಿದ್ದಾರೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.